# ಚಿತ್ತಾರದೊಳಗಿನ ಚಿತ್ರ

ಚಿತ್ರದೊಳಗೊಂದು ಬಣ್ಣದ ಚಿತ್ರ
ಒಂದರೊಳಗೊಂದಾಗಿ
ಒಂದನೊಂದು ಹೋಲುತಿದೆ
ತನ್ನೊಳಗೆ ತನ್ನನೇ ಇರಿಸಿಕೊಂಡು
ಅದರೊಳಗೆ ಅದೇ ಆವರಿಸಿದೆ
ಅದೇ ಆಗಿ ಅವತರಿಸಿದೆ

ಗಾರೆಯ ಕಲೆಗಳ ಹುದುಗಿಸಿಕೊಂಡ
ಗೋಡೆಯ ರೂಪ ಬದಲಾಗಿದೆ
ಮೊಳೆಗೆ ಹಲ್ಲಿಯಂತೆ
ಅಂಟಿದ ಅಂಗಿ ಕಾಯುತಿದೆ
ತನ್ನೊಡೆಯನ ಬರುವಿಕೆಗೆ


ಅಂದದ ಪಾದರಕ್ಷೆಗಳೆರಡು
ಊರನ್ನೆಲ್ಲಾ ಸುತ್ತಿ ಬಂದು ನಿಂತಿವೆ
ತಾವು ಹಾದುಹೋದ ಹಾದಿ ಬೀದಿಗಳ
ಚೆಂದವ ಗೋಡೆಯ ಬಳಿ ವರ್ಣಿಸಿವೆ

ಅವಳಿ ಜವಳಿಗಳಂತೆ ಈ ಚಿತ್ರಗಳು
ಅವೆರಡಕೆ ಒಂದೇ ರೀತಿಯ ಲಕ್ಷಣಗಳು
ಒಂದನು ನೋಡಿದರೆ ತಿಳಿದುಬಿಡುವುದಿಲ್ಲಿ
ಇನ್ನೊಂದಕ್ಕೆ ಅದೇ ರೀತಿಯ ಹೋಲಿಕೆ.

ತನ್ನೊಳಗೆ ತನ್ನನೆ ಹೊಂದಿದ ಚಿತ್ರವು
ತನ್ನ ರೂಪವ ತಾನೇ ನೋಡಲಾಗದೆ
ನೋವಿನಿಂದ ಪರಿತಪಿಸುತಿದೆ

ಮುಗಿಯದ ಚಿತ್ರವಿದು
ಚೌಕಟ್ಟಿನಲ್ಲೊಂದು ಚಿತ್ರ
ಅದರ ಗರ್ಭದೊಳಗಿನ್ನೊಂದು
ಅನಂತ ಕಲ್ಪನೆಗಳ ಕಣ್ಮನ ಸೆಳೆವ
ನಿಗೂಢ ಲೋಕ ಕಣ್ಣೆದುರು

● **ರಂಜಿತಾ ಎಂ., ಕೊಪ್ಪ**



# ಇಷ್ಟೇ ಸಾಕು

ಅಲ್ಲೆಲ್ಲೋ ಇದೆಯಂತೆ
ನನ್ನ ನಿಜದ ಮನೆ
ಇಲ್ಲಿ ಬಂದಿರುವುದು ಸುಮ್ಮನೆ
ಕೆಲ ಕಾಲ ಸುತ್ತಿ ಸುಳಿದಾಡಲು
ನಯವಾದ ಕುಸುರಿ ಕೆಲಸ ಬೇಕಿಲ್ಲ
ಹೇಗಿದ್ದರೇನಂತೆ, ಇಷ್ಟೇ ಸಾಕು
ಮತ್ತೆ ಮತ್ತೆ ಕಾಡುವ, ಕಾಣುವ
ಚಿತ್ರದೊಳಗಿನ ಚಿತ್ರಗಳ ಸಾಲುಗಳು
ಪದೇ ಪದೇ ಕಾಡುವ
ಅಡಗಿ ಕುಳಿತ ನೆನಪುಗಳಂತೆ
ಚೌಕಟ್ಟಿಗಾಗಿ ಚಿತ್ರವೋ
ಚಿತ್ರಕ್ಕಾಗಿಯೇ ಚೌಕಟ್ಟೋ...
ಬಟ್ಟೆಗಳ ಹಂಗಿಲ್ಲ, ಪಾದರಕ್ಷೆ ಬೇಕಿಲ್ಲ
ಸುತ್ತುವೆನು ಹೀಗೇ
ಇಲ್ಲೇ ಗೋಡೆಯ ಆಚೆ–ಈಚೆ
ದೂಳಲ್ಲವಿದು ಎದೆಯ ರಂಗೋಲಿ
ಬರೆಯುವೆನು ಹೊಸ ರೂಹು
ಕಟ್ಟುವೆನು ಹೊಸ ಕನಸು
ಒಂದಷ್ಟು ಸುತ್ತಾಡಿ ಸುಳಿದಾಡಿ
ಉಸಿರಾಡಿದ ಗುರುತೂ ಉಳಿಯದಂತಾಗಿ
ಮತ್ತೆ ತೆರಳುವೆನು
ಆ 'ನನ್ನ ನೆಲೆಗೆ...'

● **ಸುಬ್ಬಲಕ್ಷ್ಮಿ ಎಚ್.ಕೆ.**